ಪಂಡರಾಪುರದ ಇತಿಹಾಸ

ಕಥೆ : ಮೋಹನಾ ಸೂರ್ಯನಾರಾಯಣ ಚಿತ್ರ: ಶಂಕರ್

1 ಮಹಾರಾಷ್ಟ್ರದಲ್ಲಿ ಪುಂಡಲೀಕನೆಂಬುವನೊಬ್ಬನಿದ್ದ. ಅವನು ತನ್ನ ಪತ್ನಿಯ ಮಾತು ಕೇಳಿ ತನ್ನ ಹೆತ್ತವರನ್ನು ತುಂಬಾ ಕಠಿಣವಾಗಿ ನಡೆಸಿಕೊಳ್ಳುತ್ತಿದ್ದ. ಒಂದು ಬಾರಿ ಪುಂಡಲೀಕನು ತನ್ನ ಕುಟುಂಬದೊಂದಿಗೆ ವಾರಣಾಸಿಗೆ ಯಾತ್ರೆ ಹೊರಟ.

2 ಓ! ಅವನೆಂಥ ಸ್ವಾರ್ಥಿ ಮನುಷ್ಯ! ಅವನು ಮತ್ತು ಅವನ ಹೆಂಡತಿ ಇಬ್ಬರು ಮಾತ್ರ ಕುದುರೆಯ ಮೇಲೆ ಪ್ರಯಾಣ ಮಾಡುತ್ತಿದ್ದಾರೆ.

ವಯಸ್ಸಾದ ಹೆತ್ತವರು ಕಾಲುನಡಿಗೆಯಲ್ಲೇ ಹೋಗುವಂತೆ ಮಾಡಿದ್ದಾನೆ. ಇದು ಅನ್ಯಾಯ.

3 ಅವರು ರಾತ್ರಿ ಒಂದು ಆಶ್ರಮದ ಗುಡಿಸಿಲಿನ ಬಳಿ ತಂಗಿದ್ದರು. ಅಲ್ಲಿ ಕುಕ್ಕುಟ ಸ್ವಾಮಿ ಎಂಬ ಸಂನ್ಯಾಸಿಯೊಬ್ಬನಿದ್ದ. ನಿದ್ದೆ ಬಾರದ ಕಾರಣ ಪುಂಡಲೀಕ ಹೊರಗೆ ಬಂದು ಸುತ್ತಾಡುತ್ತಿದ್ದ. ಬೆಳದಿಂಗಳ ಮಂದ ಬೆಳಕಿನಲ್ಲಿ ಅವನು ಮಲಿನ ವಸ್ತ್ರ ಧರಿಸಿದ್ದ ಕುರೂಪಿ ಹೆಂಗಸರನ್ನು ಕಂಡ. ಅವರು ಆಶ್ರಮದ ಮುಂಭಾಗಿಲ ಬಳಿ ಗುಡಿಸುತ್ತಿದ್ದರು.

4 ಸ್ವಲ್ಪ ಹೊತ್ತಿನ ನಂತರ ಮೂರು ಮಂದಿ ದಿವ್ಯ ಸ್ತ್ರೀಯರು ಕಾಣಿಸಿಕೊಂಡರು. ಅವನು ಅವರಿಗೆ ನಮಸ್ಕರಿಸಿದ.

ಅಮ್ಮಾ, ನೀವು ಯಾರು? ಆಗ ಆಶ್ರಮ ಗುಡಿಸಿಲಿನ ಒಳಗೆ ಹೋದ ಮೂರು ಜನ ಕುರೂಪಿ ಹೆಂಗಸರು ಯಾರು? ಮತ್ತೆ ಈಗ ನೀವು ಯಾರು?

ಮಗನೇ, ನಾವು ಪವಿತ್ರ ನದಿಗಳಾದ ಗಂಗೆ, ಯಮುನೆ, ಸರಸ್ವತಿಯರು. ಜನರು ನಮ್ಮಲ್ಲಿ ಸ್ನಾನ ಮಾಡಿ ತಮ್ಮ ಪಾಪಗಳನ್ನು ಕಳೆದುಕೊಳ್ಳುತ್ತಾರೆ. ನಾವು ಪ್ರತಿದಿನವೂ ಇಲ್ಲಿಗೆ ಬಂದು, ಇಲ್ಲಿ ಸೇವೆ ಸಲ್ಲಿಸಿ ಆ ಪಾಪದ ಕೊಳೆಯನ್ನು ಕಳೆದುಕೊಂಡು, ಪರಿಶುದ್ಧರಾಗಿ ಮರಳುತ್ತೇವೆ.

5 ಅಮ್ಮ, ಪವಿತ್ರ ನದಿಗಳಿದ ನಿಮ್ಮಲ್ಲಿರುವ ಪಾಪಗಳನ್ನೆಲ್ಲ ನಿವಾರಿಸುವ ಶಕ್ತಿ ಈ ಸಾಧುಗಳಿಗೆ ಹೇಗೆ ಬಂತು?

ಪುಂಡಲೀಕ, ಇಲ್ಲಿನ ಸಾಧು ತಮ್ಮ ಹೆತ್ತವರನ್ನು ದೇವರಿಗಿಂತಲೂ ಹೆಚ್ಚಿನದಾಗಿ ಕಾಣುತ್ತಾನೆ. ಅವರನ್ನು ಪೂಜಿಸುತ್ತಾ ಅವರ ಸೇವೆ ಮಾಡುತ್ತಾನೆ. ಇದರಿಂದಲೇ ಅವರಿಗೆ ಆ ಶಕ್ತಿ ಬಂತು.

6 ಅಮ್ಮಾ ಗಂಗೆ, ನನ್ನ ಹೆತ್ತವರಿಗೆ ನಾನು ಬಹಳ ಕಾಲದಿಂದ ಕಷ್ಟ ಕೊಟ್ಟಿದ್ದೇನೆ, ಪೀಡಿಸಿದ್ದೇನೆ. ನಾನು ಈ ಪಾಪಗಳನ್ನು ಕಳೆದುಕೊಳ್ಳುವುದು ಹೇಗೆ ಎಂದು ನೀವೇ ದಾರಿ ತೋರಿಸಬೇಕು.

ಮಗೂ, ಈಗಲಾದರೂ ನೀನು ಅವರ ಸೇವೆ ಮಾಡಿ, ಅವರನ್ನು ಸಂತೋಷಪಡಿಸು. ದೇವರು ನಿಜಕ್ಕೂ ನಿನ್ನ ಮೇಲೆ ಕೃಪೆ ತೋರುವನು.

ಪುಂಡಲೀಕನು ತನ್ನ ಹೆತ್ತವರ ಕಾಲಿಗೆ ಬಿದ್ದು, ಬಹಳ ದೀರ್ಘಕಾಲ ಅತ್ತು ಪ್ರಾರ್ಥಿಸಿದ; ಅವರ ಕ್ಷಮೆ ಕೋರಿದ. ಅವರು ಕೂಡ ಅವನನ್ನು ಕ್ಷಮಿಸಿದರು.

7 ಪುಂಡಲೀಕನು ಚಂದ್ರಭಾಗಾ ನದಿಯ ತೀರದಲ್ಲಿ ಒಂದು ಆಶ್ರಮವನ್ನು ಕಟ್ಟಿದ. ಅಲ್ಲಿಗೆ ಅವನು ತನ್ನ ಹೆತ್ತವರನ್ನು ಕರೆತಂದು, ಅವರನ್ನು ಪ್ರೀತಿಯಿಂದ ಸೇವೆ ಮಾಡತೊಡಗಿದ. ಅವನ ಪತ್ನಿಗೂ ತನ್ನ ತಪ್ಪಿನ ಅರಿವಾಯಿತು.

8 ಪುಂಡಲೀಕನು ತನ್ನ ಹೆತ್ತವರ ಸೇವೆ ಮಾಡುತ್ತಿದ್ದ ವಿಷಯವನ್ನು ಕೇಳಿದ ಶ್ರೀಕೃಷ್ಣನು ತನ್ನ ಪತ್ನಿ ರುಕ್ಮಿಣಿಯೊಂದಿಗೆ ಅಲ್ಲಿಗೆ ಬಂದ.

ಪುಂಡಲೀಕ, ಓ ಪುಂಡಲೀಕ!

ಓ, ಕೃಷ್ಣ ಪರಮಾತ್ಮ! ಬಾ, ಈ ಕೂಡಲೇ ನಾನು ನನ್ನ ಹೆತ್ತವರ ಸೇವೆಯ ಕೆಲಸ ಮುಗಿಸಿ ಬರುತ್ತೇನೆ. ಅಲ್ಲಿಯ ತನಕ ದಯವಿಟ್ಟು ಈ ಕಲ್ಲಿನ ಮೇಲೆ ಕುಳಿತು ವಿಶ್ರಾಂತಿ ತೆಗೆದುಕೋ.

ಆದರೆ ಕೃಷ್ಣ ಅಲ್ಲಿ ಕುಳಿತುಕೊಳ್ಳಲಿಲ್ಲ, ಅಲ್ಲೇ ತನ್ನ ಸೊಂಟದ ಮೇಲೆ ಕೈಯಿಟ್ಟುಕೊಂಡು ನಿಂತ.

9

ಆ ಕಲ್ಲಿಗೂ ಒಂದು ಕಥೆಯಿತ್ತು. ಶುಕ್ರನ ಮಗನಾದ ತ್ವಷ್ಟೃವು ಇಂದ್ರಪದವಿಯನ್ನು ಬಯಸಿ, ಅವನನ್ನು ಕೊಲ್ಲಬೇಕೆಂದು ವೃತ್ರಾಸುರನ ಸಹಾಯ ಕೇಳಿದ. ಅವನು ದರ್ಪದಿಂದ ಹೇಳಿದ...



ವೃತ್ರಾಸುರ ಹಾಗೆ ಮಾಡಿದ ಇಂದ್ರನನ್ನು ನುಂಗಿಬಿಟ್ಟ.

10

ಮುಂದೆ ದೇವತೆಗಳು ವೃತ್ರನ ಮೇಲೆ ಜೃಂಭೀಕ ವೆಂಬ ಅಸ್ತ್ರವನ್ನು ಪ್ರಯೋಗಿಸಿದರು. ಅದರ ಹೊಡೆತಕ್ಕೆ ವೃತ್ರನು ಆಕಳಿಸಿದ; ಆಗ ಇಂದ್ರನು ಸೂಕ್ಷ್ಮರೂಪ ತಾಳಿ ಹೊರಬಿದ್ದು, ದೂರ ಓಡಿ ಹೋದ. ಮುಂದೆ ವೃತ್ತನಿಗೂ ಇಂದ್ರನಿಗೂ ಸಂಧಾನವಾಯಿತು. ಆದರೆ ಇಂದ್ರನಿಗೆ ವೃತ್ರನ ಮೇಲಿದ್ದ ಕೋಪ ಹೋಗಲೇ ಇಲ್ಲ.



11

ಈ ಅಸುರನನ್ನು ಒಣಗಿದ ಅಸ್ತ್ರದಿಂದಾಗಲಿ, ಒದ್ದೆಯಾದ ಅಸ್ತ್ರದಿಂದಾಗಲಿ ಕೊಲ್ಲಲಾಗದು. ಆದ್ದರಿಂದ ನಾನು ಜಗನ್ಮಾತೆಯನ್ನು ಪ್ರಾರ್ಥಿಸಿ ವರವನ್ನು ಪಡೆಯುತ್ತೇನೆ.

ಇಂದ್ರನ ಪ್ರಾರ್ಥನೆಯ ಫಲವಾಗಿ ವಿಷಪೂರಿತವಾದ ನೊರೆಯಂಥ ಒಂದು ವಸ್ತು ಸಮುದ್ರದಿಂದ ಮೇಲೆದ್ದು ಬಂತು. ಅದನ್ನು ಇಂದ್ರನು ತನ್ನ ವಜ್ರವೆಂಬ ಆಯುಧಕ್ಕೆ ಲೇಪಿಸಿ ಆ ರಾಕ್ಷಸನನ್ನು ಕೊಂದ.

12



13 ಆ ಕಲ್ಲು ಇದ್ದ ಸ್ಥಳದಲ್ಲೇ ಪುಂಡಲೀಕನ ಆಶ್ರಮವಿತ್ತು. ಅಲ್ಲಗೆ ಬಂದ ಶ್ರೀಕೃಷ್ಣನು ಆ ಕಲ್ಲಿನ ಮೇಲೆ ಆಕಸ್ಮಿಕವಾಗಿ ನಿಂತ. ಶ್ರೀಕೃಷ್ಣನ ಸ್ಪರ್ಶದಿಂದ ಶಾಪವಿಮೋಚನೆಯಾಗಿ, ಇಂದ್ರನು ಮೇಲೆದ್ದು ನಿಂತ.

14 ತನ್ನ ಹೆತ್ತವರ ಸೇವೆ ಮಾಡಿ ಮುಗಿಸಿದ ಪುಂಡಲೀಕನು ಶ್ರೀಕೃಷ್ಣನ ಬಳಿಗೆ ಬಂದು, ಅವನಿಗೆ ನಮಸ್ಕರಿಸಿ, ಅವನ ಕ್ಷಮೆ ಕೇಳಿದ.



ಪುಂಡಲೀಕನ ಹೆಸರಿನಿಂದಲೇ ಆ ಪ್ರದೇಶಕ್ಕೆ ಪುಂಡರೀಕಪುರ ಎಂದು ಹೆಸರಾಯಿತು. ಮುಂದೆ ಅದೇ ಪಂಡರಾಪುರ ಎಂದಾಯಿತು. ಶ್ರೀಕೃಷ್ಣನೇ ನಿಂತ ಶಿಲೆಯಾದ್ದರಿಂದ ಆ ಕಲ್ಲನ್ನು ಅವನು ವಿಠಲ ಎಂದು ಪೂಜಿಸಿದ, ವಿಠ್ ಎಂದರೆ ಕಲ್ಲು ಎಂದರ್ಥ.

ತಂದೆತಾಯಿಗಳೇನು ಕಸಕಡ್ಡಿಗಳೆ? ಅವರು ಸುಪ್ರೀತರಾದ ಹೊರತು ಸಾಧನೆಯ ಕರ್ಮಗಳಾವುವೂ ಫಲ ಬಿಡಲಾರವು. ಚೈತನ್ಯದೇವ ಯಾವಾಗ ನೋಡಿದರೂ ಪ್ರೇಮೋನ್ಮತ್ತನಾಗಿರುತ್ತಿದ್ದ. ಆದರೂ ಸಂನ್ಯಾಸ ತೆಗೆದುಕೊಳ್ಳುವ ಮುನ್ನ ಎಷ್ಟೊಂದು ದಿನ ಆತ ತನ್ನ ತಾಯಿಗೆ ಸಮಾಧಾನ ಹೇಳಬೇಕಾಯಿತು! ಆತ ಆಕೆಗೆ ಹೇಳಿದ: 'ಅಮ್ಮಾ, ವ್ಯಸನ ಪಡಬೇಡ, ಆಗಾಗ ಬಂದು ನೋಡಿ ಹೋಗುತ್ತೇನೆ.'

– ಶ್ರೀರಾಮಕೃಷ್ಣರು